ದೂರದೃಷ್ಟಿ ಇಲ್ಲದಿರುವ ಬಜೆಟ್, ರೈತರ ಪರ ಯಾವುದೇ ಚಿಂತನೆ ಇಲ್ಲದಿರುವ ಬಜೆಟ್ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ತುಂಬಾ ಧನ್ಯವಾದಗಳು.

ಉಪಾಧ್ಯಕ್ಷರು:– ಈಗ ಶಾಸನ ರಚನೆ, ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.

9. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2015

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, 2015 ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಉಪಾಧ್ಯಕ್ಷರು:– ವಿಧೇಯಕದ ಬಗ್ಗೆ ವಿವರಿಸಿ.

ಶ್ರೀ ಟಿ.ಬಿ. ಜಯಚಂದ್ರ:– ಉಪಾಧ್ಯಕ್ಷರೆ, ಇದು ಬಹಳ simple ಆಗಿರುವಂಥ ಮಸೂದೆ, ಇಲ್ಲಿ ತಂದಿರುವಂಥ ಒಂದೇ ತಿದ್ದುಪಡಿ ಏನೆಂದರೆ, ಮೊದಲು 60 ಹೆಕ್ಟೇರ್ ಎಂದು ಇತ್ತು. 60 ಹೆಕ್ಟೇರ್‌ಗೆ 150 ಎಕರೆ ಆಗುತ್ತಿತ್ತು. ಆದರೆ ಅಲ್ಲಿ ಭೂಮಿ ಇಲ್ಲದೇ ಇರುವುದರಿಂದ, ಅದನ್ನು 125 ಎಕರೆ ಎಂದು ತಿದ್ದುಪಡಿ ಮಾಡಬೇಕು, ಅಷ್ಟೇ ಇದರಲ್ಲಿ ಇನ್ನೇನೂ ಇಲ್ಲ. ಅದಕ್ಕಾಗಿ ದಯಮಾಡಿ ಈ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕು.

ಉಪಾಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2015ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಖಂಡ2:

2 ನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ನೇ ಖಂಡವು ವಿಧೇಯಕದ ಅಂಗವಾಯಿತು.

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ:

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವದ ಅಂಗೀಕಾರ

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ,

2015ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಅನುಬಂಧ–2)

ಉಪಾಧ್ಯಕ್ಷರು:– ಈಗ ಮಾನ್ಯ ಲೋಬೋರವರು ಬಜೆಟ್ ಬಗ್ಗೆ ಮಾತನಾಡಬೇಕು. ಮಾತನಾಡುತ್ತೀರಾ? ಅವರು 15 ನಿಮಿಷ ಮಾತನಾಡಲಿ. ಆಮೇಲೆ ನೋಡೋಣ, ಸ್ವಲ್ಪ ಮಾತನಾಡಲಿ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್:– Calling attention ತೆಗೆದುಕೊಳ್ಳಿ ಸರ್.

ಉಪಾಧ್ಯಕ್ಷರು:– OK. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ. ಮೊದಲನೆಯದು ಮಾನ್ಯ ಸುನಿಲ್ ಕುಮಾರ್ ಅವರದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರು ಬರುತ್ತಾರೆಯೇ?

ಉಪಾಧ್ಯಕ್ಷರು:– ಇಲ್ಲವಲ್ಲಾ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬಹಳ ಮುಖ್ಯವಾದ ವಿಷಯವಿದೆ. ಒಂದು ನಿಮಿಷ ಬರುತ್ತಾರೆಯೇ?

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸುನಿಲ್‌ಕುಮಾರ್ ಇಲ್ಲ. ಮಾನ್ಯ ಶಿವಾನಂದ ಪಾಟೀಲ್‌ರವರೆ ತಾವು ಮಾತನಾಡಿ.